## ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್

## ಸಿ.ಸಿ ನಂ.865/2021

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ದಿಲೀಪ | ಪಿಡಬ್ಲ್ಯೂ | 1 |
| ತಂದೇ:ಗಂಡನ ಹೆಸರು | : | ಬೋಸಯ್ಯ | ಸಿಡಬ್ಲ್ಯೂ | 3 |
| ವಯಸ್ಸು | : | 21 ವರ್ಷ | | |
| ಉದ್ಯೋಗ | : | ಚಾಲಕ ವೃತ್ತಿ | | |
| ವಾಸ ಸ್ಥಳ | : | ಚಿಕ್ಕಜಾಜುರು, ತಾಃ ಹೊಳಲಕೆರೆ<br>ಜಿಃ ಚಿತ್ರದುರ್ಗ | | |

**ದಿನಾಂಕ:09-01-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಈಗ ತೋರುತ್ತಿರುವ ಅಮಾನತು ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದು ನಿಪಿ.1 ಎಂದು, ಸದರಿಯವರ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಅದಕ್ಕೆ ನಾನು ದಿಃ14-08-2016 ರಂದು ಸಾಸಲು ಭುತಪ್ಪನ ದೇವಸ್ಥಾನಕ್ಕೆ ಹೋಗಿದ್ದಾಗ ಚಾಸಾ-1 ರವರು ಆರೋಪಿಯನ್ನು ಆ ದೇವಸ್ಥಾನದ ಹತ್ತಿರಕ್ಕೆ ಕರೆದುಕೊಂಡು ಬಂದರು. ಆ ಸಂದರ್ಬದಲ್ಲಿ ಆರೋಪಿ ಬೈಕ್ ಕಳ್ಳತನ ಮಾಡಿದ್ದಾರೆ ಎಂದು ತಿಳಿಸಿದರು. ಆ ಸಂದರ್ಬದಲ್ಲಿ ಆ ದೇವಸ್ಥಾನದ ಹಿಂಭಾಗದಲ್ಲಿದ್ದ ಸಮುದಾಯ ಭವನಕ್ಕೆ ಕರೆದುಕೊಂಡು ಹೋದರು. ಆರೋಪಿ ಆ ಸ್ಥಳದಲ್ಲಿ ಬೈಕ ಅನ್ನು ಬಚ್ಚಿಟ್ಟಿದ್ದನು. ಆ ಬೈಕ ಟಿ ವಿ ಎಸ್ ಸ್ಟಾರ್ ಸಿ ಟಿ ಕಂಪನಿಯದ್ದಾಗಿದ್ದು, ಅದರ ನಂಬರ ಕೆಎ 17 ವೈ 0858 ಆಗಿರುತ್ತದೆ. ಪೊಲೀಸರು ಆ ಬೈಕ ಅನ್ನು ನನ್ನ ಸಮಕ್ಷಮ ಜಪ್ತು ಮಾಡಿಕೊಂಡರು. ಆ ಸಂದರ್ಬದಲ್ಲಿ ನನ್ನ ಜೊತೆ ಚಾಸ-2 ರವರು ಸಹ ಇದ್ದರು. ಆಗ ಸಮಯ ಬೆಳಿಗ್ಗೆ 9.30 ರಿಂದ 10.45 ಗಂಟೆ ಆಗಿತ್ತು.

ಆ ನಂತರ ಪೊಲೀಸರು ನನ್ನ ಹಾಗೂ ಚಾಸಾ-2 ಮತ್ತು ಆರೊಪಿಯನ್ನು ಕರೆದುಕೊಂಡು ಸಾಸಲಾಡದ ಹತ್ತಿರ ಇರುವ ಸರಕಾರಿ ಆಸ್ಪತ್ರೆ ಹತ್ತಿರಕ್ಕೆ ಕರೆದುಕೊಂಡು ಹೋದರು. ಅಲ್ಲಿಯೂ ಸಹ ಹಾನಗಲ್ಲ ತಾಲೂಕಿಗೆ ಸಂಬಂದಪಟ್ಟ ಒಂದು ಬೈಕ್ ಅನ್ನು

ಕಳ್ಳತನ ಮಾಡಿ ಬಚ್ಚಿಟ್ಟಿದ್ದರು. ಆ ಬೈಕ್ ಹಿರೋ ಹೊಂಡಾ splendour plus ಕಂಪನಿಗೆ ಸೇರಿದ್ದು, ಅದರ ನಂಬರ ಕೆಎ 27 ಎಸ್ 9023 ಆಗಿರುತ್ತದೆ. ಆ ಸಂದರ್ಬದಲ್ಲಿ ಆ ಬೈಕ್ ಅನ್ನು ಸಹ ಪೊಲೀಸರು ಜಪ್ತು ಮಾಡಿಕೊಂಡರು. ಆಗ ಸಮಯ 10.45 ರಿಂದ 11.45 ಗಂಟೆ ಸಮಯವಾಗಿತ್ತು. ಈ ಬಗ್ಗೆ ಪೊಲೀಸರು ನನ್ನ ಮತ್ತು ಚಾಸಾ–2 ರವರ ಸಹಿ ಪಡೆದರು. ಈ ಬಗ್ಗೆ ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡರು.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ಆ ಎರಡು ಬೈಕ್ ಗಳನ್ನು ಯಾರೂ ಸಹ ತೆಗೆದುಕೊಳ್ಳದೇ ಇರುವ ಕಾರಣ ಆ ಸ್ಥಳದಲ್ಲಿ ಇಟ್ಟಿರುವುದಾಗಿ ಆರೋಪಿ ಪೊಲೀಸರಿಗೆ ತಿಳಿಸಿದರು ಎಂದರೆ ಸರಿ. ಸಾಸಲುರು ಹಳ್ಳದ ಬಳಿ ಇಟ್ಟಿದ್ದ ಬೈಕ್ ಹಾನಗಲ್ಲ ತಾಲೂಕಿನ ಅಲ್ಲಾಪುರ ಗ್ರಾಮಕ್ಕೆ ಸೇರಿದ ಬೈಕ್ ಎಂದರೆ ಸರಿ. ಅ ದಿನ ಪೊಲೀಸರು ಆ ಪೋಟೋದಲ್ಲಿರುವ ಬೈಕ ಅನ್ನು ಜಪ್ತು ಮಾಡಿದರು ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್